Amount spent on Crawford Hall.

Q.—981. **Sri D. R. KARI GOWDA** (Hassan).—

Will the Government be pleased to state :—

(*a*) the amount spent on the Crawford Hall that has been constructed in Mysore City ;

(*b*) the amount donated by Mr. Crawford for the said building ?

A.—**Sri Kadidal MANJAPPA** (Minister for Revenue and Public Works).—

(*a*) Rs. 8,92,037.

(*b*) Rs. 1,50,000.

ಶ್ರೀ ಡಿ. ಆರ್. ಕರಿಗೌಡ.—ಈಗ ಕ್ರಾಫರ್ಡ್ ಹಾಲ್ ಯಾವುದಕ್ಕೆ ಉಪಯೋಗವಾಗುತ್ತಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾರ್ವಜನಿಕ ಸಭೆಗಳು, ದೊಡ್ಡ ದೊಡ್ಡ ಸಮಾರಂಭಗಳು—ಇವುಗಳಿಗೆ ಉಪಯೋಗಿಸುತ್ತಾರೆ.

ಶ್ರೀ ಡಿ. ಆರ್. ಕರಿಗೌಡ.—ಯಾವ ಉದ್ದೇಶದಿಂದ ಈ ದಾನವನ್ನು ಕೊಟ್ಟಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಆಗಿನ ಸಮಯದಲ್ಲಿ ಅಸೆಂಬ್ಲಿಯ ಹಾಲ್ ಕಟ್ಟಬೇಕೆಂದು ಕೊಟ್ಟರು ಎಂದು ನೆನಪಿದೆ.

ಶ್ರೀ ಡಿ. ಆರ್. ಕರಿಗೌಡ.—ಅವರು ಆ ಉದ್ದೇಶದಿಂದ ಕೊಟ್ಟಮೇಲೆ ಈ ಕಟ್ಟಡವನ್ನು ಬೇರೆ ಕೆಲಸಕ್ಕೆ ಉಪಯೋಗಿಸುವುದು ಸರಿಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಅಸೆಂಬ್ಲಿ ಬೆಂಗಳೂರಿನಲ್ಲಿಯೇ ನಡೆಯುತ್ತಿರುವುದರಿಂದ ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ವರ್ಷಕ್ಕೊಂದು ಸಲ ವಾದರೂ ಅಸೆಂಬ್ಲಿ ಅಧಿವೇಶನವನ್ನು ಅಲ್ಲಿ ಏರ್ಪಡಿಸುವುದು ಒಳ್ಳೆಯದಲ್ಲವೇ ?

Mr. SPEAKER.—It is a big question.

ಶ್ರೀ ಡಿ. ಆರ್. ಕರಿಗೌಡ.—Crawford Hall ಉದ್ದೇಶ ಸಾರ್ಥಕವಾಗಿಲ್ಲ, ಅಲ್ಲವೇ ?

Sri Kadidal MANJAPPA.—It does not arise.

Sri V. M. MASCARENHAS.—What are the exact terms under which the donation was accepted ?

Sri Kadidal MANJAPPA.—I do not know the exact terms.

Sri V. M. MASCARENHAS.—Do the Government realise that they spent Rs. 8 lakhs and have given the name 'Crawford Hall' when that gentleman has given a donation of only Rs. 1½ lakhs ? Is there wisdom in that ?

Sri Kadidal MANJAPPA.—I cannot answer that at this stage.

Sri V. M. MASCARENHAS.—That is exactly why I am asking you the terms under which this donation was accepted. Justify your action or you criticise your predecessors ?

Sri Kadidal MANJAPPA.—The donation has been accepted and the building has been named after him. It is too late to reopen the matter or re-examine the matter.

ಶ್ರೀ ಕೆ. ಲಕ್ಕಪ್ಪ.—ಅಲ್ಲಿ ಅಸೆಂಬ್ಲಿ ಮೀಟಿಂಗ್ಸ್ ನಡೆಯದೇ ಇರುವುದರಿಂದ ಅದನ್ನು ಸರ್ಕಾರಿ ಆಫೀಸುಗಳಿಗಾಗಿ ಉಪಯೋಗಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಯೋಚನೆ ಮಾಡುತ್ತಾ ಇದ್ದೇವೆ. ಕೆಲವು portion ಈಗಾಗಲೇ ಉಪಯೋಗಿಸಿಕೊಂಡಿದೆ.

ಶ್ರೀ ಕೆ. ಲಕ್ಕಪ್ಪ.—ಮಧ್ಯೆ ಇರತಕ್ಕ ಹಾಲನ್ನು public performancesಗೆ ಕೊಟ್ಟಾಗ ಫೀಜು ತೆಗೆದು ಕೊಳ್ಳುವ ಏರ್ಪಾಡು ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಫೀಜು ವಸೂಲು ಮಾಡಿಕೊಳ್ಳುತ್ತೇವೆ.

Sri K. PUTTASWAMY.—Is that building not being made use of to hold college classes ?

Sri Kadidal MANJAPPA.—I am told certain classes are being held temporarily.

Pawnbrokers

Q.—1023. **Sri S. SIDDAPPA** (Magadi).—

Will the Government be pleased to state :—

(*a*) whether it has come to their notice that there are shops of pawnbrokers in big towns who advance loans on pledging old cloths and old vessels ;

(*b*) if so, whether they would arrange to close down such shops ?

A—**Sri Kadidal MANJAPPA** (Minister for Revenue and Public Works).—

(*a*) Yes.

(*b*) There is no law banning business by pawnbrokers.

ಶ್ರೀ ಎಸ್. ಸಿದ್ದಪ್ಪ.—ಇದನ್ನು ಕಾನೂನು ಮೂಲಕ ಪ್ರತಿಬಂಧಿಸಿ ಸರಿಪಡಿಸುವುದಕ್ಕೆ ಸಾಧ್ಯವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಪ್ರತಿಬಂಧಕ ಏನೂ ಇಲ್ಲ. ಕಾನೂನಿಗೆ ವಿರುದ್ಧವಾಗಿ ಅವರೇನಾದರೂ ವರ್ತಿಸಿದರೆ ಅವರ ಮೇಲೆ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಎಸ್. ಸಿದ್ದಪ್ಪ.—ಇದನ್ನು ಮಾರ್ಪಾಡು ಮಾಡುವುದಕ್ಕೆ ಸರ್ಕಾರದವರು ಒಂದು ಕಾನೂನು ತಂದು ಅವರು ಬಡವರಿಗೆ ಕಷ್ಟಕೊಡುತ್ತಾ ಇರುವುದನ್ನು ತಪ್ಪಿಸುವುದಕ್ಕೆ ಪ್ರಯತ್ನಪಡುತ್ತೀರಾ ?